

# ವ್ಯಕ್ತದ ಮೂಲಕ ಅವ್ಯಕ್ತದ ಹಂಬಲ

**ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣು–ಗಂಡಿನ ಪಾತ್ರಗಳ ಕುರಿತಂತೆ ಸಹೃದಯರ ಗಮನಸೆಳೆಯುವ 'ಗಿವ್ ಅಪ್ ದಿ ಫೋಸ್ಟ್', ಕಾವ್ಯದಂತೆ ಒಂದು ಅನುಭವವಾಗಿ ನೋಡುಗರನ್ನು ಕಾಡುತ್ತದೆ.**

■ ಗೌರಿ

ಜಗತ್ತಿನ ಬಹುತೇಕ ಕಡೆಗಳಲ್ಲಿ ಇಂದಿಗೂ ಮದುವೆ ಎಂಬುದು ಸಂತಾನ ಪಡೆಯುವ ಅಧಿಕೃತ ಬಂಧನ ಎಂದೇ ಪರಿಗಣಿಸಲಾಗಿದೆ. ಹಾಗಾಗಿಯೇ ಸಂತಾನ ಪಡೆಯಲು ಸಾಧ್ಯವಾಗದಿದ್ದಾಗಲೆಲ್ಲ ಮತ್ತೊಂದು ಮದುವೆಯಾಗುವುದು ಸರ್ವೇಸಾಮಾನ್ಯ ಸಂಗತಿ. ಆದರೆ ಇಲ್ಲೊಂದು ವ್ಯತ್ಯಾಸವಿದೆ. ಹೀಗೆ ಸಂತಾನಹೀನತೆಯ ಕಾರಣಕ್ಕೆ ಮರುಮದುವೆಯಾಗುವ 'ಅವಕಾಶ?' ಹೆಣ್ಣಿಗೆ ಇರುವುದಿಲ್ಲ. ಗಂಡಸಿಗೆ ಮಾತ್ರ ಇರುವ ವಿಶೇಷ ಅವಕಾಶ ಇದು! ಇದು ಪುರುಷ ಪ್ರಧಾನ ಸಮಾಜದ ಮುಖ್ಯ ರೋಗಲಕ್ಷಣವೂ ಹೌದು.

ಇಂದಿನ ಆಧುನಿಕ ಸಮಾಜದಲ್ಲಿ ಮಹಿಳೆ ಈ ಪುರುಷ ಪ್ರಧಾನ ವ್ಯವಸ್ಥೆಯನ್ನು ಕೆಲಮಟ್ಟಿಗಾದರೂ ಪ್ರಶ್ನಿಸುತ್ತಿದ್ದಾಳೆ. 'ತಾನು ಪುರುಷನ ಅಧೀನಳಲ್ಲ' ಎನ್ನುವ ಮಹಿಳೆಗೂ ಪುರುಷನ ಆಟಾಟೋಪಕ್ಕೆ ಹೆಣ್ಣೊಂದು ಸಾಧನ ಎನ್ನುವುದನ್ನು ಬೇರೆ ಬೇರೆ ಬಗೆಗಳಲ್ಲಿ ನಂಬಿರುವ ಸಾಂಪ್ರದಾಯಿಕ ಮನಸ್ಥಿತಿಗೂ ನಡುವೆ ನಡೆಯುವ ಘರ್ಷಣೆಯನ್ನು ಎದುರಿಸುವುದೂ ಇಂದಿನ ಮಹಿಳೆಯ ಮುಂದಿರುವ ಬಹುದೊಡ್ಡ ಸವಾಲು. ಸಂತಾನದ ವಿಷಯ ಬಂದಾಗಲಂತೂ ಈ ಘರ್ಷಣೆ ಇನ್ನಷ್ಟು ಜಟಿಲ. ಯಾಕೆಂದರೆ ಹೆಣ್ಣಿರುವುದೇ ತನ್ನ ಸಂತಾನಕ್ಕೆ ಜನ್ಮಕೊಡಲು ಎಂಬುದು ಜಗತ್ತಿನ ಬಹುತೇಕ ಸಮುದಾಯಗಳ ಬಲವಾದ ನಂಬಿಕೆ. ಆದರೆ ಇಂದು ಸಂತಾನಹೀನತೆಯ ಸಮಸ್ಯೆಗೆ ಮಹಿಳೆ ಮಾತ್ರವೇ ಕಾರಣವಲ್ಲ, ಪುರುಷನೂ ಕಾರಣವಾಗಬಲ್ಲ ಎಂಬುದನ್ನು ತಂತ್ರಜ್ಞಾನ ಸ್ಪಷ್ಟವಾಗಿ ತಿಳಿಸಿಕೊಡುತ್ತಿದೆ. ಆದರೆ ಈ ಸಂಗತಿ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯ ಸ್ಥಾನಮಾನವನ್ನು ಬದಲಿಸಿದೆಯೇ?

ಈ ಪ್ರಶ್ನೆಗಳನ್ನು ಎತ್ತಿಕೊಂಡು, ಕುಟುಂಬ ವ್ಯವಸ್ಥೆಯಲ್ಲಿನ ಸ್ತ್ರೀ–ಪುರುಷ ಸ್ಥಾನಗಳಿಗಿರುವ ವಿವಿಧ ಆಯಾಮವನ್ನು ಬಹುಸೂಕ್ಷ್ಮವಾಗಿ ಶೋಧಿಸುವ ಕೆಲಸವನ್ನು 'ಗಿವ್ ಅಪ್ ದಿ ಫೋಸ್ಟ್' ಕಿರುಚಿತ್ರ ಮಾಡುತ್ತದೆ.



ಹೆಸರು: ಗಿವ್ ಅಪ್ ದಿ ಫೋಸ್ಟ್ (ಜೋರ್ಡಾನ್)
ನಿರ್ಮಾಣ: ಆಲಾ ಆಲಾಸಾದ್
ಛಾಯಾಗ್ರಹಣ: ಬೆನೋಟ್ ವಮ್ಮೈಲಾರ್ಡ್
ಸಂಕಲನ: ಅಬ್ದಲ್ಲಾ ಸದಾ
ತಾರಾಗಣ: ಮಾರಿಯಾ ಜೆರಿಯೇಕ್, ರ್ಯ್ಯುದ್ ಬಾರ್ಕಿ

ಬರಿಯ ವಸ್ತುವಿನ ಕಾರಣಕ್ಕೆ ಮಾತ್ರವಲ್ಲ, ಕಥನ ಕಟ್ಟುವ ಕೌಶಲದಿಂದ, ಧ್ವನಿಯನ್ನು ಹೊಮ್ಮಿಸುವ ಕಾವ್ಯಗುಣದಿಂದ, ಪ್ರಬುದ್ಧವಾದ ಅಭಿನಯದಿಂದಲೂ ಈ ಕಿರುಚಿತ್ರ ಗಮನಸೆಳೆಯುತ್ತದೆ.

ಕಾಣುವ ಕ್ವಚಿತ್ತನ್ನು ಜೀಕುಗೋಲಾಗಿಸಿಕೊಂಡು ಕಾಣದಿರುವ ಬೃಹತ್ತಿನತ್ತ ಜೀಕಿ ಕೈಚಾಚುವುದೇ ಕಾವ್ಯ ಎನ್ನುವುದು ಕಾವ್ಯಕ್ಕಿರುವ ಒಂದು ವ್ಯಾಖ್ಯಾನ. ಇದನ್ನು ಯಾವುದೇ ಸೃಜನಶೀಲ ಕೃತಿಗೂ ಅನ್ವಯಿಸಬಹುದು. ಈ ಸಾಲನ್ನು ಈ ಕಿರುಚಿತ್ರದ ನಿರ್ಮಿತಿಯ ಹಿಂದಿನ ಸೂತ್ರವಾಗಿಯೂ ನೋಡಬಹುದು. ಇಡೀ ಕಿರುಚಿತ್ರದಲ್ಲಿ ನಿರ್ದೇಶಕರು ಸಾಧ್ಯವಾದಷ್ಟೂ ಕನಿಷ್ಠವನ್ನು 'ಕಾಣಿಸಿ', ಅದರ ಹಿಂದಿನ ರಾಜಕೀಯವನ್ನೂ ನೋವಿನ ಪಲಕುಗಳನ್ನೂ ಬಹುಪರಿಣಾಮಕಾರಿಯಾಗಿ 'ಬಿಂಬಿಸಿ'ದ್ದಾರೆ. ಹಾಗಾಗಿ ಇದನ್ನು ಒಂದು ಕಾವ್ಯವಾಗಿಯೂ ನೋಡಿಕೊಳ್ಳಬಹುದು.

ಸಲಾಮ್ ಎಂಬ ಹೆಣ್ಣು ಈ ಕಿರುಚಿತ್ರದ ಕೇಂದ್ರ. ತಾನು ಆಯ್ದುಕೊಂಡಿರುವ ವಸ್ತು ಯಾವುದು? ಅದನ್ನು ಹೇಳಹೊರಟಿರುವ ಮಾಧ್ಯಮದ ಶಕ್ತಿ–ಮಿತಿಗಳೇನು ಎನ್ನುವುದರ ಕುರಿತು ನಿರ್ದೇಶಕರಿಗೆ ಸ್ಪಷ್ಟ ಅರಿವಿದೆ. ಹಾಗಾಗಿಯೇ ಆ ಕ್ಯಾನ್ವಾಸ್ ಬಿಟ್ಟು ಎಲ್ಲಿಯೂ ಆಚೆ ಹೋಗದ ಹಾಗೆ, ರಂಗವೇದಿಕೆಯ ಮೇಲಿನ ಸ್ಪಾಟ್‌ಲೈಟಿನ ಹಾಗೆ ಹೇಳಬೇಕಿರುವುದನ್ನು ಬಹುಪ್ರಖರವಾಗಿ ಹೇಳುತ್ತಲೇ ಉಳಿದ ಭಾಗಗಳನ್ನು ನಮ್ಮೊಳಗೆ ಬೆಳೆಯಲು ಇಂಬು ಕೊಡುವ ಹಾಗೆ ಚಿತ್ರ ಕಟ್ಟಿದ್ದಾರೆ.

ಹೇಳುವ ಮತ್ತು ಧ್ವನಿಸುವ ನಿರ್ದೇಶಕರ ಸೃಜನಶೀಲ ಆಟಕ್ಕೆ ಬೆಂಬಲವಾಗಿ ನಿಂತಿರುವುದು ಛಾಯಾಗ್ರಹಣ. ಕಥನವ್ಯಾಪ್ತಿಯಿಂದ ಭಿನ್ನವಾಗಿ ಎದ್ದು ಕಾಣದ ಹಾಗೆ, ಆದರೆ ಅದಕ್ಕೊಂದು ವಿಶಿಷ್ಟ ಹೊಳಪನ್ನು ನೀಡುವ ಹಾಗೆ ಕಿರುಚಿತ್ರದುದ್ದಕ್ಕೂ ಛಾಯಾಗ್ರಹಣ ಕೆಲಸ ಮಾಡಿದೆ. ರಾತ್ರಿ, ಕ್ಯಾಮೆರಾಕ್ಕೆ ಬೆತ್ತಲೆ ಬೆನ್ನು ಹಾಕಿ ಸಿಗರೇಟು ಸೇದುತ್ತಿರುವ ಸಲಾಮಳ ಗಂಡನ ಚಿತ್ರ, ಅವರ ಮೇಲೆ ಒತ್ತಡ ಹೇರುವ ಸಲಾಮಳ ಅತ್ತೆಯ (ಅಪ್ಪ–ಅಮ್ಮನ ಮುಖ ಚಿತ್ರದಲ್ಲಿ ಕಾಣಿಸುವುದೇ ಇಲ್ಲ!) ಕೈಯಲ್ಲಿನ ಜಪದ ಮಣಿಸರ ಚಲಿಸುವ ದೃಶ್ಯವೇ ಸಾಕು ಛಾಯಾಗ್ರಹಣದ ಶಕ್ತಿಯನ್ನು ಹೇಳುವುದಕ್ಕೆ.

ಅತಿಯಾದ ಮೆಲೊಡ್ರಾಮಾ ಇಲ್ಲದೇ ಸಟಲ್ ಅನ್ನುವ ರೀತಿ ಸಲಾಮಳು ತನ್ನ ದಾರಿ ತಾನು ಆಯ್ದುಕೊಳ್ಳುವ ದಿಟ್ಟತನದೊಂದಿಗೆ ಈ ಕಿರುಚಿತ್ರ ಕೊನೆಗೊಳ್ಳುತ್ತದೆ. ನೋಡುಗರ ಮನಸ್ಸು ಕರಗಿಸಿ ಆ ಕ್ಷಣಕ್ಕೆ ಮೆಚ್ಚುಗೆ ಗಳಿಸುವ ಸುಲಭದಾರಿ ಹಿಡಿಯದೇ ನೋಡುಗರಲ್ಲಿ ಪ್ರಶ್ನೆಗಳನ್ನು ಎಬ್ಬಿಸುವ ದುಸ್ತರ ದಾರಿ ಹಿಡಿದಿರುವುದೇ ಈ ಕಿರುಚಿತ್ರದ ಬಗ್ಗೆ ಮೆಚ್ಚುಗೆ ಹುಟ್ಟಿಸುತ್ತದೆ.

ಈ ಕಿರುಚಿತ್ರ ವೀಕ್ಷಣೆಗೆ ಕೊಂಡಿ bit.ly/2Zatpfw / ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.